ತನ್ನದೇ ಆದ ತಾತ್ವಿಕ ಚಿಂತನೆ, ಇತಿಹಾಸ ಮತ್ತು ಅರ್ಥಶಾಸ್ತ್ರಗಳ ಒಂದು ಇಡಿಯಾದ ವ್ಯವಸ್ಥೆಯನ್ನು ವ್ಯಾಪಕ ಪ್ರಮಾಣದಲ್ಲಿ ನಿರ್ಮಾಣ ಮಾಡಿತು.'

ಮುಂದೆ ಲೋಹಿಯಾರ 'ಮಾರ್ಕ್ಸ್ ಗಾಂಧಿ ಸಮಾಜವಾದ' ಪುಸ್ತಕಕ್ಕಾಗಿ ಕೆ. ಪುಟ್ಟಸ್ವಾಮಿ 'ಮಾರ್ಕ್ಸ್ ನಂತರದ ಅರ್ಥಶಾಸ್ತ್ರ'ವನ್ನು ಇಡಿಯಾಗಿ ಕನ್ನಡಿಸಿದರು. ಆ ಪುಸ್ತಕದ ಕೆಲವು ಗ್ರಹಿಕೆಗಳು:

'ಬಂಡವಾಳಶಾಹಿಯ ಬೆಳವಣಿಗೆ ಕುರಿತು ಮಾರ್ಕ್ಸ್‌ವಾದ ರೂಪಿಸಿದ ತತ್ವಗಳಿಗೆ ಸಂಬಂಧಿಸಿದಂತೆ ಚರಿತ್ರೆ ಅತಿ ವಿಚಿತ್ರ ಕರಾಮತ್ತು ಮಾಡಿತು. ಅದೇನೆಂದರೆ, ಮಾರ್ಕ್ಸ್‌ವಾದದ ನಿರೀಕ್ಷೆಯಂತೆ ಜರ್ಮನಿಯಲ್ಲಿ ಕ್ರಾಂತಿ ಸಂಭವಿಸಲಿಲ್ಲ. ಅದು ಪಶ್ಚಿಮ ಯುರೋಪಿನ ಯಾವುದೇ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲೂ ಸಂಭವಿಸಲಿಲ್ಲ. ಬದಲಿಗೆ, ಕ್ರಾಂತಿಯಾದದ್ದು ರಷ್ಯಾದಲ್ಲಿ.'

'ಬಂಡವಾಳ ಶೇಖರಣೆ ಕುರಿತಂತೆ ಮಾರ್ಕ್ಸ್‌ವಾದ ಕಂಡುಕೊಂಡ ನಿಯಮಗಳು ಸಾಕಷ್ಟು ನಿಖರವಾಗಿವೆ. ಏಕಸ್ವಾಮ್ಯ ಹಾಗೂ ದುಡಿಮೆಗಾರರ ಸಾಮಾಜೀಕರಣ ಮುಂತಾದ ಪ್ರಶ್ನೆಗಳ ಬಗೆಗೆ ಮಾರ್ಕ್ಸ್‌ವಾದ ಕಂಡುಕೊಂಡ ಸತ್ಯಗಳು ಒಂದು ಕೋನದಿಂದ ಸರಿಯಾಗಿವೆ. ಆದರೆ ಬಡತನದ ಶೇಖರಣೆಯ ನಿಯಮವನ್ನು ವಿವರಿಸುವಾಗ, ಹಾಗೂ ಆ ಕಾರಣದಿಂದ ಉಂಟಾಗುವ ವರ್ಗ ಹೋರಾಟವನ್ನು ಗ್ರಹಿಸುವಾಗ, ಹಾಗೂ ಜಾಗತಿಕ ಕ್ರಾಂತಿಯನ್ನು ವಿವರಿಸುವಾಗ ಮಾರ್ಕ್ಸ್‌ವಾದ ಸತ್ಯಾಂಶಗಳನ್ನು ಗ್ರಹಿಸದೆ ಎಡವಿತು.

ಹಾಗಾದರೆ ಉತ್ಪಾದನೆ ಕುರಿತಂತೆ ಮಾರ್ಕ್ಸ್‌ವಾದದ ಒಳನೋಟ, ಹಾಗೂ ಉತ್ಪಾದನೆಯ ವಿತರಣೆ ಕುರಿತಂತೆ ಅದರ ಮಬ್ಬುಗಣ್ಣು – ಇವೆರಡರ ನಡುವೆ ಯಾವಾಗ ತಿಕ್ಕಾಟ ಶುರುವಾಗುತ್ತದೆ? ಇದರರ್ಥ ಬಡತನ ಹಾಗೂ ನಿರ್ಗತಿಕ ಸ್ಥಿತಿಗಳು ನಿರ್ಮಾಣವಾಗಲಿಲ್ಲ ಎಂದಲ್ಲ. ಅಥವಾ ವರ್ಗಹೋರಾಟ ಹಾಗೂ ಜಾಗತಿಕ ಕ್ರಾಂತಿಯ ಕೇಂದ್ರಗಳನ್ನು ಗುರುತಿಸಲು ಮಾರ್ಕ್ಸ್‌ವಾದಕ್ಕೆ ಸಾಧ್ಯವಾಗಲಿಲ್ಲ ಎಂದೂ ಅಲ್ಲ. ಮಾರ್ಕ್ಸ್ ಮತ್ತು ಅವನ ಅನುಯಾಯಿಗಳಿಗೆ ಪ್ರಸ್ತುತವಾದ ವಾಸ್ತವ ಸಂಗತಿಗಳು ತಿಳಿದಿರಲಿಲ್ಲ ಎಂದೂ ಅರ್ಥವಲ್ಲ. ನಿಜಸಂಗತಿಯೆಂದರೆ, ಈ ಎಲ್ಲ ಸಂಗತಿಗಳನ್ನು ಜೀರ್ಣಿಸಿಕೊಂಡು ಬಂಡವಾಳಶಾಹಿಯ ಬಗೆಗಿನ ತನ್ನ ಸಾರ್ವತ್ರಿಕ ಸಿದ್ಧಾಂತದೊಳಗೆ ಇವುಗಳನ್ನೆಲ್ಲ ಹೆಣೆಯುವ ಶಕ್ತಿ ಮಾರ್ಕ್ಸ್‌ವಾದಕ್ಕಿರಲಿಲ್ಲ.'

ಲೋಹಿಯಾರ ಸುದೀರ್ಘ ವಿಶ್ಲೇಷಣೆ ಅರ್ಧದಲ್ಲೇ ನಿಂತಾಗ ಬರೆದಿದ್ದ ಕೊನೆಯ ವಾಕ್ಯಗಳು:

'ರಷ್ಯಾದ ರಾಜಕೀಯ ಬೆಳವಣಿಗೆಗೆ ಸಂಬಂಧಿಸಿದಂತೆ ನಮ್ಮ ಈಚಿನ ಪರಿಶೀಲನೆಗಳಿಂದ ಏನೇ ಸತ್ಯ ಕಂಡುಬಂದಿರಲಿ, ರಷ್ಯಾ ಒಂದು ಪ್ರಭುತ್ವರಹಿತ ಸಮಾಜವಾಗಿ ಪರಿವರ್ತನೆ ಆಗುವ ಸಾಧ್ಯತೆಯಿಲ್ಲ, ಅಥವಾ ಅದು ಬಂಡವಾಳಶಾಹಿಯ ಮೇಲೆ ಸಮಾಜವಾದ ಸಾಧಿಸುವ ವಿಜಯದ ಸಾಧನವೂ ಅಲ್ಲ ಎಂಬುದನ್ನು ಈ ಕ್ಷಿಪ್ರ ಆರ್ಥಿಕ ಸಮೀಕ್ಷೆ ಸ್ಪಷ್ಟಪಡಿಸಿದೆ. ರಷ್ಯಾ ಬಂಡವಾಳಶಾಹಿಯಿಂದ ಬಿಡಿಸಿಕೊಂಡಿದ್ದು ಬಂಡವಾಳಶಾಹಿಯ ಮೇಲೆ ಮಾರಕ ಪರಿಣಾಮ ಬೀರಿಲ್ಲ. ರಷ್ಯಾದ ಉತ್ಪಾದನಾ ಮಾದರಿಗಳು, ವಿಶೇಷವಾಗಿ ಅದರ ಆರ್ಥಿಕ ರಕ್ಷಣೆ, ಈಗಿರುವಂತೆಯೇ ಉಳಿದರೆ, ವೇತನ ಮತ್ತು ಅಧಿಕಾರದ ತಾರತಮ್ಯಗಳು ಮುಂದುವರೆಯುತ್ತವೆ. ಜಗತ್ತಿನ ಬಡತನ ಅಥವಾ ವಿಶ್ವದ ಯುದ್ಧಗಳನ್ನು ನಿರ್ಮೂಲನೆ ಮಾಡುವ ದಾರಿಯನ್ನು ತೋರಿಸಲು ರಷ್ಯಾ ಅಸಮರ್ಥವಾಗುತ್ತದೆ.

ರಷ್ಯಾ ಸಮರ್ಥವಾಗಿ ತೋರಿಸಿರುವ ಅಂಶಗಳೆಂದರೆ, ಸಾಮಾಜಿಕ ಒಡೆತನದಡಿಯಲ್ಲಿ ಯೋಜಿತ ಆರ್ಥಿಕತೆಯ ಸಾಧ್ಯತೆ ಹಾಗೂ ಹಿಂದುಳಿದ ರಾಷ್ಟ್ರವೊಂದು ಕ್ಷಿಪ್ರ ವೇಗದಲ್ಲಿ ಸಾಧಿಸುವ ಅಗಾಧ ಶಕ್ತಿಯ ಸಾಧ್ಯತೆ. ಜರ್ಮನಿಯ ಜೊತೆಗಿನ ಯುದ್ಧವು ರಷ್ಯಾವನ್ನು ಶಕ್ತ ರಾಷ್ಟ್ರವನ್ನಾಗಿಸಿದೆ. ಅದರ ಸ್ನೇಹ ಗಳಿಸಲು ಇತರ ರಾಷ್ಟ್ರಗಳು ಕಾತರದಿಂದಿರುತ್ತವೆ. ಇದರಿಂದ ಒಳ್ಳೆಯ ಅಥವಾ ಕೆಟ್ಟ ಪ್ರಭಾವಗಳು ಹೊಮ್ಮಬಹುದು. ಆದರೆ ಜಗತ್ತಿನ ಇತಿಹಾಸದ ಪ್ರಧಾನ ಪಾತ್ರಗಳನ್ನು ಮಾತ್ರ ಬೇರೆಲ್ಲಿಯಾದರೂ ಹುಡುಕಬೇಕು.'

ಬರವಣಿಗೆ ಆರಂಭಿಸಿದಾಗ ಅರ್ಥಶಾಸ್ತ್ರ, ರಾಜಕೀಯ, ಇತಿಹಾಸ, ತತ್ವಶಾಸ್ತ್ರ – ಈ ನಾಲ್ಕು ದಿಕ್ಕುಗಳಿಂದ ಮಾರ್ಕ್ಸ್‌ವಾದವನ್ನು ಪರಿಶೀಲಿಸಲು ಲೋಹಿಯಾ ಸ್ಥೂಲ ನಕಾಶೆಯೊಂದನ್ನು ಹಾಕಿಕೊಂಡಿದ್ದರು. ಆದರೆ, ಅರ್ಥಶಾಸ್ತ್ರ ಕುರಿತ ಲೋಹಿಯಾ ಆಲೋಚನೆಗಳು ಅರ್ಧದಲ್ಲಿದ್ದಾಗ ಪೊಲೀಸರು ಅವರನ್ನು ಬಂಧಿಸಿದರು.

'ಅಲ್ಲಿಂದಾಚೆಗೆ ಈ ರೀತಿಯ ಶೋಧನೆ ಮತ್ತು ಬರವಣಿಗೆ ನನ್ನಲ್ಲಿ ಆಸಕ್ತಿ ಹುಟ್ಟಿಸುವುದು ನಿಂತಿತು' ಎಂದ ಲೋಹಿಯಾ, ಮುಂದೆ ಈ ಬರಹವನ್ನು ಪ್ರಕಟಿಸುವಾಗ ಬರೆದ ಟಿಪ್ಪಣಿ: 'ಈ ವಿಷಯಗಳು ಅಪೂರ್ಣವಾದವು. ಅವುಗಳನ್ನು ಬರೆದ ನಂತರ ಯಾವ ತಿದ್ದುಪಡಿಯನ್ನೂ ಮಾಡಿಲ್ಲ. ಆದರೆ ತಪ್ಪು ಸಹ ಅರಿವಿನ ಮೂಲವೇ.'

20 ಮೇ 1944. ಮುಂಬೈನ ಬಾಬುಲ್‌ನಾಥ್ ರಸ್ತೆಯ ಕಟ್ಟಡವೊಂದರ ಮೇಲೆ ಪೊಲೀಸರು ದಾಳಿ ಮಾಡಿದರು. ಮೂರನೆಯ ಮಹಡಿಯಲ್ಲಿ ಲೋಹಿಯಾ ತಮ್ಮ ಗೆಳೆಯರ ಜೊತೆ ಏನೋ ಚರ್ಚೆ ಮಾಡುತ್ತಿದ್ದರು. ಅಲ್ಲಿಂದ ತಪ್ಪಿಸಿಕೊಳ್ಳಲು ಲೋಹಿಯಾರ ಗೆಳೆಯರು ಯೋಚಿಸತೊಡಗಿದರು. ಆದರೆ ಇದ್ದಕ್ಕಿದ್ದಂತೆ ಲೋಹಿಯಾಗೆ ವಿಚಿತ್ರ ಜಡತೆ ಆವರಿಸಿತು. ಆ ಸ್ಥಿತಿ ಕುರಿತು ಲೋಹಿಯಾ ಮುಂದೊಮ್ಮೆ ಬರೆದರು:

'ಕೆಲವು ಸಲ ನಾನು ಅಳತೆಗೆ ಸಿಗದಷ್ಟು ಜಡವಾಗುತ್ತೇನೆ; ಸಂವೇದನಾಶೂನ್ಯನಾಗುತ್ತೇನೆ ನಾವು ಕೆಲವರು ಮನೆಯೊಂದರ ಮೂರನೇ ಮಹಡಿಯಲ್ಲಿ ಪೊಲೀಸರಿಗೆ ಸಿಕ್ಕಿಕೊಂಡಿದ್ದೆವು. ಪೊಲೀಸರು ಮನೆಯನ್ನು ಸುತ್ತುವರಿದು, ಕೆಳಗಿನ ಅಂತಸ್ತಿನಿಂದ ಮೇಲುಮೇಲಕ್ಕೆ ಹುಡುಕುತ್ತಾ ಬಂದಿದ್ದರು. ಆಗ ತಾನೇ ಹೊತ್ತಿಕೊಂಡಿದ್ದ ಬೆಂಕಿಯನ್ನೋ, ಅಥವಾ ಉದ್ರೇಕಕಾರಿಯಾದ ಹಾದಿಬೀದಿಯ ದೊಂಬಿಯನ್ನೋ ನೋಡುವವರಂತೆ ಜನ ಬಾಲ್ಕನಿಯ ಮೇಲೆ ಗುಂಪುಗೂಡಿದ್ದರು. ಯಾವುದೇ ಉಪಾಯ ಸೂಚಿಸುವ ಸ್ಥಿತಿಯಲ್ಲಿ ನಾನಿರಲಿಲ್ಲ. ಉಳಿದವರು ಅಲ್ಲಿಂದ ತಪ್ಪಿಸಿಕೊಳ್ಳುವ ಉಪಾಯಗಳನ್ನು ಚರ್ಚಿಸುತ್ತಿದ್ದರು. ಅವರ ಮಾತು ನನಗೆ ಕೇಳುತ್ತಿತ್ತು. ಆದರೆ ನಾನು ಕಲ್ಲಾಗಿಬಿಟ್ಟಿದ್ದೆ. ಯಾವುದಾದರೂ ಒಂದು ತೀವ್ರ ಸನ್ನಿವೇಶ ಶುರುವಾಗಿ ಅದು ಜಾಗೃತ ಸ್ಥಿತಿಯನ್ನು ಸ್ಫೋಟಗೊಳಿಸುವ ತನಕ ಮಧ್ಯದ ಅಲ್ಪವಿರಾಮವನ್ನು ಎದುರಿಸಲು ನನ್ನ ವಿಚಿತ್ರ ಜಾಯಮಾನ ಇಂಥದೊಂದು ರಕ್ಷಣಾ ಮಾರ್ಗವನ್ನು ರೂಢಿಸಿಕೊಳ್ಳುತ್ತದೆ'

9 ಆಗಸ್ಟ್ 1942ರಂದು ಶುರುವಾದ ಲೋಹಿಯಾರ 21 ತಿಂಗಳ ಭೂಗತವಾಸಕ್ಕೆ 20 ಮೇ 1944ರಂದು ತೆರೆ ಬಿತ್ತು.

ಒಂದು ತಿಂಗಳು ಮುಂಬೈನಲ್ಲಿ ಬಂಧನದಲ್ಲಿದ್ದ ಲೋಹಿಯಾರನ್ನು ಲಾಹೋರ್ ಕೋಟೆಯ ಸೆರೆಮನೆಗೆ ತರಲಾಯಿತು.

ಬ್ರಿಟಿಷ್ ಕಾಲದ ಲಾಹೋರ್ ಜೈಲು ಹಿಂಸೆ, ಕ್ರೌರ್ಯಗಳ ಭೀಕರ ಪ್ರಯೋಗಶಾಲೆಯಾಗಿತ್ತು. 1931ರಲ್ಲಿ ಇದೇ ಜೈಲಿನಲ್ಲೇ ಸ್ವಾತಂತ್ರ್ಯವೀರ ಭಗತ್‌ಸಿಂಗರನ್ನು ಗಲ್ಲಿಗೇರಿಸಲಾಗಿತ್ತು.

'ಬ್ರಿಟಿಷರು ತಮಗೆ ಅತ್ಯಂತ ಅಪಾಯಕಾರಿ ಎನ್ನಿಸುವ ಸೆರೆಯಾಳುಗಳನ್ನು ಲಾಹೋರ್ ಕೋಟೆಯ ಜೈಲಿಗೆ ಕರೆ ತರುತ್ತಿದ್ದರು; ಇಲ್ಲಿ ಹಿಂಸೆಯ ಹಳೆಯ ವಿಧಾನಗಳ ಜೊತೆಗೆ ಹೊಸ ಹೊಸ ವಿಚಿತ್ರ ಹಿಂಸೆಗಳನ್ನು ಪ್ರಯೋಗ ಮಾಡುತ್ತಿದ್ದರು ಎಂಬ ಸುದ್ದಿ ಹಬ್ಬಿತ್ತು. ರಹಸ್ಯ ವಿಷಯಗಳನ್ನು ಬಾಯಿ ಬಿಡಿಸಲು, ಕೈದಿಗಳ ಮೇಲಿದ್ದ ಆಪಾದನೆಗಳಿಗೆ ಸಾಬೀತು ಹುಡುಕಲು ಈ ಪ್ರಯೋಗಗಳನ್ನು ಮಾಡುತ್ತಿದ್ದರು...'

ಈ ಥರದ ಸುದ್ದಿಗಳು ಹಿಂದೆಯೇ ಲೋಹಿಯಾ ಕಿವಿಗೆ ಬಿದ್ದಿದ್ದವು. ಅಷ್ಟೊತ್ತಿಗಾಗಲೇ ಜೆ.ಪಿ. ಲಾಹೋರ್ ಜೈಲಿನಲ್ಲಿ ಬಗೆಬಗೆಯ ಹಿಂಸೆಗಳನ್ನು ಅನುಭವಿಸಿದ್ದರು. ಅದ್ಯಾವುದಕ್ಕೂ ಜಗ್ಗದ ಜೆ.ಪಿ. ಪೊಲೀಸರಿಗೆ ಸ್ಪಷ್ಟವಾಗಿ ಹೇಳಿದ್ದರು: 'ನನ್ನ ಇತ್ತೀಚಿನ ಗುಪ್ತ ಚಟುವಟಿಕೆಗಳನ್ನು ಬಿಟ್ಟು ನಿಮ್ಮ ಮತ್ತಾವುದೇ ಪ್ರಶ್ನೆಗೆ ಉತ್ತರಿಸಬಲ್ಲೆ. ನಾನು ನನ್ನ ನಾಡಿನ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದೇನೆ. ಸ್ವಾತಂತ್ರ್ಯ ಸಿಕ್ಕುವವರೆಗೂ ಅಥವಾ ನಾನು ಸಾಯುವವರೆಗೂ ನನ್ನ ಹೋರಾಟ ಮುಂದುವರಿಯುತ್ತದೆ.'

ಆದರೆ ಜೆ.ಪಿ. ಲಾಹೋರ್ ಜೈಲಿನಲ್ಲಿ ಇರುವುದಾಗಲೀ, ಪೊಲೀಸರಿಂದ ಚಿತ್ರಹಿಂಸೆ ಅನುಭವಿಸುತ್ತಿರುವುದಾಗಲೀ ಲೋಹಿಯಾಗೆ ಗೊತ್ತಿರಲಿಲ್ಲ. ತಮ್ಮನ್ನು ಲಾಹೋರ್ ಜೈಲಿಗೆ ತಂದಿದ್ದಾರೆಂಬುದು ಕೂಡ ಲೋಹಿಯಾಗೆ ಬಹಳ ದಿನಗಳ ತನಕ ತಿಳಿದಿರಲಿಲ್ಲ.

(ಸಶೇಷ)